ಓ.ಎಸ್ **66/2016**

ಡಿ.ಡಬ್ಲೂ-**1**

ದಿನಾಂಕಃ **03.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲು ವಾದಿ ಪರ ಶ್ರೀ ಬಿ ಎ ಎಸ್ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆಯ ಹೆಸರು ಚಿಕ್ಕೇಗೌಡ ನನ್ನ ತಂದೆಗೆ ಇಬ್ಬರು ಹೆಂಡತಿಯರು. ಅವರ ಹೆಸರು ಸಿದ್ದಮ್ಮ ಹಾಗೂ ದೇವೀರಮ್ಮ. ಸಿದ್ದಮ್ಮವರಿಗೆ 3 ಜನ ಗಂಡು ಮಕ್ಕಳು ಅವರುಗಳೆಂದರೆ ವಾದಿ, ಪ್ರತಿವಾದಿ ಹಾಗೂ ಚಿಕ್ಕಣ್ಣೇಗೌಡ ಹಾಗೂ ಒಬ್ಬಳು ಮಗಳು- ಲಕ್ಷ್ಮಮ್ಮ. ದೇವೀರಮ್ಮರವರಿಗೆ ಪುಟ್ಟೇಗೌಡ ಎಂಬ ಒಬ್ಬ ಮಗನಿರುತ್ತಾರೆ. ವಾದಿ, ಪ್ರತಿವಾದಿ ಹಾಗೂ ಚಿಕ್ಕಣ್ಣೇಗೌಡ ಹಾಗೂ ಲಕ್ಷ್ಮಮ್ಮ ನಾವೆಲ್ಲರೂ ಹರದನಹಳ್ಳಿಯಲ್ಲಿ ವಾಸವಾಗಿದ್ದೇವೆ.

ನನ್ನ ತಂದೆ ತೀರಿಕೊಂಡಾಗ ನಾನು ಚಿಕ್ಕಮಗುವಾಗಿದ್ದೆ ಅಂದರೆ 12 ದಿನದ ಮಗುವಾಗಿದ್ದೆ. ದೇವೀರಮ್ಮನವರ ಮಗ ಪುಟ್ಟೇಗೌಡರವರು ಎಲ್ಲರಿಗಿಂತ ಹಿರಿಯರು. ನನ್ನ ತಂದೆ ತೀರಿಕೊಂಡಾಗ ವಾದಿಗೆ 18 ವರ್ಷ ವಯಸ್ಸಾಗಿತ್ತು. ವಾದಿ ಮದುವೆಯಾದಾಗ ಅವರಿಗೆ 24 ವರ್ಷ ವಯಸ್ಸಾಗಿತ್ತು. ವಾದಿ ಮದುವೆಯಾದ ನಂತರ ಬೇರೆ ವಾಸವಿದ್ದರು ಎಂದರೆ ಸರಿಯಲ್ಲ. ನೀವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದು ಹೇಳಿದ್ದು ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದಕ್ಕೆ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಕಳೆದ 30 ವರ್ಷಗಳ ಹಿಂದೆ ನಾನು ಹಾಗೂ ವಾದಿ ಬೇರೆಯಾಗಿರುತ್ತೇವೆ- ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದಕ್ಕೆ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಒಟ್ಟು ಕುಟುಂಬವಾಗಿದ್ದಾಗ ನಿಮ್ಮ ಬಳಿ ಪಡಿತರ ಚೀಟಿ ಇದೆಯಾ ಎಂದರೆ ಸಾಕ್ಷಿ 25 ವರ್ಷಗಳ ಹಿಂದೆ ಪಡಿತರ ಚೀಟಿ ಬಂದಿರುತ್ತದೆ ಅದಕ್ಕಿಂತ ಹಿಂದೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಮದುವೆಯಾದ ನಂತರ ಅವರು ಬೇರೆಯಾದರು, ನಂತರ ನಾನು ನನ್ನ ತಾಯಿ ಜೊತೆಯಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ.

ನಿಮ್ಮ ಅಣ್ಣ ಬೇರೆಯಾದ ನಂತರ ಕೂಲಿOS 167/2021 ಮಾಡಿ ಜೀವನ ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯೇ ಕೂಲಿ ಮಾಡಿ ನಮ್ಮನ್ನೆಲ್ಲ ಸಾಕಿರುತ್ತಾರೆ. ನನ್ನ ತಾಯಿ ತೀರಿಕೊಂಡು ಸುಮಾರು 45 ವರ್ಷಗಳಾಗಿರುತ್ತದೆ. ನಮ್ಮ ತಾಯಿ ತೀರಿಕೊಂಡ ಸಮಯದಲ್ಲಿ ನನಗೆ ಮದುವೆಯಾಗಿರಲಿಲ್ಲ, ಅವರು ತೀರಿಕೊಂಡ 2 ವರ್ಷಗಳ ನಂತರ ನನ್ನ ಮದುವೆಯಾಗಿರುತ್ತದೆ ಎಂದರೆ

ಸರಿಯಲ್ಲ. ನಮ್ಮ ತಂದೆಗೆ ಪಿತ್ರಾರ್ಜಿತ ಆಸ್ತಿಗಳು ಇದ್ದವು. ಅದರ ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ. ಯಾರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸಾಕ್ಷಿ ನಮ್ಮ ತಂದೆ ಹೆಸರಿನಿಂದ ವಾದಿಯ ಹೆಸರಿಗೆ ಆಗಿರುತ್ತದೆ. ನಂತರ ಅವರು ಮಾರಾಟ ಮಾಡಿ ಹರದನಹಳ್ಳಿಯಲ್ಲಿ ಜಮೀನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಜಮೀನನ್ನು ವಾದಿ ಕಿಟ್ಟೇಗೌಡ, ಕಾಳೇಗೌಡ, ಸಿದ್ದರಾಮೇಗೌಡರವರಿಗೆ ಸುಮಾರು 60 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಆಸ್ತಿ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ. ಮಾರಾಟ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ನಿಮ್ಮ ತಕರಾರಿನಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿದ್ದ ಪಿತ್ರಾರ್ಜಿತ ಆಸ್ತಿಗಳ ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ಬಗ್ಗೆ ವಕೀಲರಿಗೆ ಹೇಳಿ ಬರೆಸಿದ್ದೀರಾ ಎಂದರೆ ಬರೆಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಸಲ್ಲಿಸಿರುವ ತಕರಾರಿನಲ್ಲಿ ಬರೆದಿರುವ ವಿಚಾರಗಳು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳುತ್ತಾರೆ. ನಾನು ಯಾವುದೇ ತಕರಾರನ್ನು ಹೇಳಿ ಬರೆಸಿರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. ವಾದಿ ಯಾವ ಕಾರಣಕ್ಕಾಗಿ ದಾವೆ ಹೂಡಿದ್ದಾರೆಂದು ತಿಳಿದುಕೊಂಡಿದ್ದೇನೆ. ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ, ನೀವು ಹೇಳುವ ಹಾಗೆ ಯಾವುದೇ ಖಾತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ವಾದಿ ಹಾಗೂ ಅವರ ಹೆಂಡತಿ ಖರೀದಿಸಿದ ಆಸ್ತಿ, ಅದರ ಮೇಲೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ವಿಭಾಗ ಮಾಡಿಕೊಂಡ ಸಮಯದಲ್ಲಿ ನಾನು ಹಾಗೂ ವಾದಿ ಇದ್ದೆವು. ವಿಭಾಗ ಮಾಡಿಕೊಂಡ ಬಗ್ಗೆ ಯಾವುದೇ ಬರವಣಿ ಆಗಿರುವುದಿಲ್ಲ. ವಿಭಾಗವಾಗಿ ಸುಮಾರು 40 ವರ್ಷಗಳಾಗಿರುತ್ತದೆ. ವಿಭಾಗದ ಪ್ರಕಾರ ನನಗೆ ಸರ್ವೆ ನಂ.18 ರಲ್ಲಿ 3 ಎಕರೆ 20 ಗುಂಟೆ, ಸರ್ವೆ ನಂ.15 ರಲ್ಲಿ ನನಗೆ 2 ಎಕರೆ ಬಂದಿರುತ್ತದೆ. ವಾದಿಗೆ ಸರ್ವೆ ನಂ.18 ರಲ್ಲಿ 2 ಎಕರೆ 13 ಗುಂಟೆ, ಸರ್ವೆ ನಂ.15 ರಲ್ಲಿ 4 ಎಕರೆ ಬಂದಿರುತ್ತದೆ. ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಎಲ್ಲಾ ಆಸ್ತಿಗಳು ವಾದಿಯ ಹೆಸರಿನಲ್ಲಿಯೇ ಇತ್ತು. ವಾದಿ ಕ್ರಯಕ್ಕೆ ಪಡೆದರು ಎಂದು ಹೇಳುವ ಜಮೀನಿನ ಸರ್ವೆ ನಂ.18 ಆಗಿರುತ್ತದೆ. ಸರ್ವೆ ನಂ.15 ರ ಜಮೀನು ಸಾಗುವಳಿ

ಮುಖಾಂತರ ಬಂದಿರುತ್ತದೆ. ಸಾಗುವಳಿ ಆಗಿ 30-40 ವರ್ಷಗಳಾಗಿರುತ್ತದೆ. ಸಾಗುವಳಿ ಮುಖಾಂತರ ಜಮೀನಿನಲ್ಲಿ 50 ವರ್ಷದ ಹಿಂದೆ ಉಳುಮೆ ಮಾಡುತ್ತಿದ್ದೆವು. ಆಗ ನನಗೆ 10-15 ವರ್ಷ ವಯಸ್ಸಾಗಿತ್ತು. ಆಗ ವಾದಿಗೆ 30 ವರ್ಷ ವಯಸ್ಸಾಗಿತ್ತು. ವಾದಿ ಹಾಗೂ ಅವರ ಹೆಂಡತಿ ಬೇರೆಯಾಗಿ ಕೂಲಿ ಕೆಲಸ ಮುಖಾಂತರ ದಾವಾಸ್ತಿಯನ್ನು ಖರೀದಿಸಿ ಸಾಗುವಳಿ ಜಮೀನನ್ನು ದರಕಾಸ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗವಾದ ನಂತರ ಖಾತೆ ಮಾಡಿಸಿಕೊಳ್ಳಲು ನಮಗೆ ಬಡತನದ ತೊಂದರೆ ಇತ್ತು. ವಿಭಾಗವಾದಾಗ ದೇವಿರಮ್ಮ ಹಾಗೂ ಅವರ ಮಗ ಪುಟ್ಟೇಗೌಡರವರಿಗೆ ಪಾಲನ್ನು ನೀಡಿರುತ್ತೇವೆ. ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಆದ ಕಾರಣ ನೀವು ವಾದಿಯ ಮಧ್ಯೆ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲದ ಕಾರಣ ವಾದಿ ನಿಮ್ಮ ಹೆಸರಿಗೆ 2 ಎಕರೆ ಜಮೀನನ್ನು ಸಾಗುವಳಿ ಮಾಡಿಸಿಕೊಟ್ಟರು ಎಂದರೆ ಸರಿಯಲ್ಲ. ನನಗೆ 2 ಎಕರೆ ಸಾಗುವಳಿ ಬಂದಿರುತ್ತದೆ. ನಾನು ಯಾವುದೇ ಜಮೀನನ್ನು ಕ್ರಯಕ್ಕೆ ಪಡೆದಿರುವುದಿಲ್ಲ. ಹರದನಹಳ್ಳಿ ಗ್ರಾಮದ ಸರ್ವೆ ನಂ.26/1 ರಲ್ಲಿ ಒಟ್ಟಾಗಿ 21 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ. ಸಾಕ್ಷಿ ಮುಂದುವರಿದು ಮನೆ ಕಟ್ಟಲು ಖರೀದಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನೀವು 2 ಎಕರೆ ಮತ್ತು 21 ಗುಂಟೆಗಳಲ್ಲಿ ಸ್ವಾಧೀನದಲ್ಲಿದ್ದೀರಿ ಅದನ್ನು  ಹೊರತುಪಡಿಸಿ ದಾವಾಸ್ತಿಯಲ್ಲಿ ವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಇಂದಿಗೂ ಸಹ ವಾದಿಗಳೇ ದಾವಾಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
ನ್ಯಾಯಾಧೀಶರು, ಹುಣಸೂರು.

ಓ.ಎಸ್ **66/2016**

ಡಿ.ಡಬ್ಲೂ-**2**

ದಿನಾಂಕಃ **03.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಬಿ ಎ ಎಸ್ ವಕೀಲರಿಂದಃ**

ನಾನು 2011-12 ನೇ ಇಸವಿಯಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನಿಡಿ1 ಬರವಣಿಗೆಯಾಗುವ ದಿನದಂದೇ ವಾದಿ ಹಾಗೂ ಪ್ರತಿವಾದಿ ಬಂದು ಬರೆಸಿರುತ್ತಾರೆ. ಅವರೊಂದಿಗೆ ಇನ್ಯಾರು ಬಂದಿರಲಿಲ್ಲ. ನಿಡಿ1 ನ್ನು ಬರೆಯುವ ಮುನ್ನ ನಾನು ಆರ್ ಟಿ ಸಿ, ವಂಶವೃಕ್ಷ ಹಾಗೂ ಆಧಾರ್ ಕಾರ್ಡನ್ನು ಪಡೆದಿರುತ್ತೇನೆ. ನಿಡಿ1 ಬರೆಯುವ ಸಮಯದಲ್ಲಿ ಖಾತೆ ವಾದಿಯರ ಹೆಸರಿನಲ್ಲಿತ್ತು. ವಾದಿಗೆ ಯಾವ ರೀತಿ ಆ ಆಸ್ತಿ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಡಿ1 ರ ಒಕ್ಕಣೆಗಳನ್ನು ನಾನೇ ತಯಾರು ಮಾಡಿರುತ್ತಾರೆ. ಪ್ರತಿವಾದಿ ಹೇಳಿ ಬರೆಸಿರುವುದಿಲ್ಲ. ನಿಡಿ1 ನ್ನು ತಯಾರಿಸಲು ಯಾವ ಕಾರಣಕ್ಕಾಗಿ ಹಕ್ಕು ಖುಲಾಸೆ ಮಾಡುತ್ತಿದ್ದಾರೆಂದು ಬರೆದಿರುವುದಿಲ್ಲ. ನಿಡಿ1 ರಲ್ಲಿ ದಾವಾಸ್ತಿ ಮುಂಚೆ ಆದ ವಿಭಾಗವಾದಾಗ ಪ್ರತಿವಾದಿಗೆ ಸೇರಿರುತ್ತದೆ, ಆದ ಕಾರಣ ಹಕ್ಕು ಖುಲಾಸೆ ಬರೆಸುತ್ತಿದ್ದೇನೆ ಎಂದು ನಮೂದಾಗಿರುವುದಿಲ್ಲ. ಸದರಿ ವಿಚಾರವನ್ನು ನಿಡಿ1 ರಲ್ಲಿ ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಡಿ1 ನ್ನು ಯಾವಾಗ ಮಾಡಿರುತ್ತೇನೆ ಎಂದು ನೆನಪಿಲ್ಲ. ನಾನು ಇಬ್ಬರು ಸಾಕ್ಷಿದಾರರು ಬೇಕು ಎಂದು ಹೇಳಿದ್ದೆ ಆಗ ಪ್ರತಿವಾದಿ ಅಲ್ಲೇ ಇದ್ದ ಶೇಖರೇಗೌಡ ಹಾಗೂ ಮಂಜುನಾಥ್ ಎನ್ನುವವರು ಕರೆದುಕೊಂಡು ಬಂದರು. ನೀವು ಬರೆಯುವ ಪತ್ರಗಳಿಗೆ ಸಾಮಾನ್ಯವಾಗಿ ಶೇಖರೇಗೌಡ ಹಾಗೂ ಮಂಜುನಾಥ್ ರವರನ್ನು ಸಾಕ್ಷಿದಾರರನ್ನಾಗಿ ಮಾಡುತ್ತೀರಾ ಎಂದರೆ ಸಾಕ್ಷಿ ಅಲ್ಲೇ ಇರುತ್ತಾರೆ, ಆದ ಕಾರಣ ಅವರನ್ನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿದಾರರಿಗೆ ಪತ್ರದಲ್ಲಿ ಬರೆದಿರುವ ವಿಚಾರಗಳು ತಿಳಿದಿರುವುದಿಲ್ಲ. ಅವರಿಗೆ ಹಣವನ್ನು ಕೊಟ್ಟು ಮೇಲೆ ಅವರು ಸಹಿ ಹಾಕುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಶೇಖರೇಗೌಡರವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ವಾದಿಗೆ ನಿಡಿ1 ನ್ನು ಬರೆದುಕೊಡಲು ಯಾವುದೇ ಉದ್ದೇಶವಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಅವಿದ್ಯಾವಂತನಾಗಿದ್ದು ಅವನಿಗೆ ಮೋಸ ಮಾಡುವ ಉದ್ದೇಶದಿಂದ ನೀವು ಹಾಗೂ

ಪ್ರತಿವಾದಿ ಶಾಮೀಲಾಗಿ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ. ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
ನ್ಯಾಯಾಧೀಶರು, ಹುಣಸೂರು.